ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಹೆಚ್. ರಸ್ತೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಕುಂಠಿತವಾಗಲು ಕಾರಣಗಳೇನು?

ಆ) ರಾಷ್ಟ್ರೀಯ ಹೆದ್ದಾರಿಗೂ ಮತ್ತು ರಾಜ್ಯ ಹೆದ್ದಾರಿಗೂ ರಸ್ತೆ ಮಧ್ಯದಿಂದ ಇರುವ ಅಂತರವನ್ನು ಸರ್ಕಾರ ನಿಗದಿಪಡಿಸಿದ ವಿವರಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕಾಮಗಾರಿಗಳು ಕುಂಠಿತವಾಗಿರುವುದಿಲ್ಲ.

ಆ) ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗೆ ರಸ್ತೆ ಮಧ್ಯಭಾಗದಿಂದ ಕಟ್ಟಡರೇಖೆ 40 ಮೀ. ಹಾಗೂ ನಿಯಂತ್ರಣ ರೇಖೆ 75 ಮೀ: ಇರಬೇಕೆಂದು ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯುಡಿ 362 ಸಿಆರ್‌ಎಂ 98, ದಿನಾಂಕ 9-10-98ರಲ್ಲಿ ಹೊರಡಿಸಿದೆ.

ಶಿವಮೊಗ್ಗ ದೇವಿ ಶುಗರ್ಸ್ ಕಂಪನಿ ಪುನರಾರಂಭ.

525(597)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ದೇವಿ ಷುಗರ್ಸ್ ಕಂಪನಿಯ ಪುನರಾರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಆ) ಶಿವಮೊಗ್ಗ ಕೆ.ಎಂ.ಎಫ್‌ನಿಂದ ಎಷ್ಟು ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ; ಅದಕ್ಕೆ ಬರುವ ವರಮಾನ ಎಷ್ಟು; ಹಾಗೂ ಇದರ ವಿವಿಧ ಉತ್ಪಾದನೆಗಳು ಯಾವುವು; ಕೆ.ಎಂ.ಎಫ್.ನಲ್ಲಿರುವ ವಾಹನಗಳೆಷ್ಟು; ಹಾಗೂ ಸಿಬ್ಬಂದಿಗಳ ವಿವರಗಳೇನು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ತುಂಗಾಭದ್ರಾ ಸಕ್ಕರೆ (ದೇವಿ ಶುಗರ್ಸ್) ಕಾರ್ಖಾನೆಯು ಖಾಸಗಿ ಕ್ಷೇತ್ರದ ಕಾರ್ಖಾನೆಯಾಗಿದ್ದು, ಸದರಿ ಕಾರ್ಖಾನೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ

ಪ್ರಸ್ತಾವನೆಯನ್ನು ಸರ್ಕಾರವು ಕೈಬಿಟ್ಟಿರುತ್ತದೆ. ಆದ್ದರಿಂದ, ಈ ಕಾರ್ಖಾನೆಯನ್ನು ಪುನರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟವು 1999-2000 ಸಾಲಿನಲ್ಲಿ ಸರಾಸರಿ ಪ್ರತಿದಿನ 1,15,281.82 ಲೀಟರ್ ನಂತೆ ಹಾಲು ಸಂಗ್ರಹಿಸಲಾಗಿದೆ.

1999-2000ದ ಒಟ್ಟು ಹಾಲು ಸಂಗ್ರಹಣೆ 4.21,95,388 ಕೆ.ಜಿ.ಗಳು ಒಟ್ಟು ಹಾಲು ಮಾರಾಟದಿಂದ ಬಂದ ಹಣ ರೂ.4087.58 ಲಕ್ಷಗಳು. ಪಾಶ್ಚೀಕರಿಸಿದ ಹಾಲು, ಪೇಡ, ಮಜ್ಜಿಗೆ, ತುಪ್ಪ ಮತ್ತು ಮೊಸರು ಒಕ್ಕೂಟದ ವಿವಿಧ ಉತ್ಪನ್ನಗಳಾಗಿರುತ್ತವೆ. ಒಕ್ಕೂಟದಲ್ಲಿ ಎರಡು ಅಂಬಾಸಿಡರ್ ಕಾರುಗಳಿರುತ್ತವೆ ಹಾಗೂ ವಿವಿಧ ದರ್ಜೆಯ 241 ಜನ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದಾರೆ.

ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮನ್‌ಗಳ ನೇಮಕಾತಿ.

526(600)

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ (ಶಿವಮೊಗ್ಗ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಈ ಹಿಂದೆ ಲೋಕೋಪಯೋಗಿ ಇಲಾಖೆಗಳಲ್ಲಿ ಗ್ಯಾಂಗ್‌ಮನ್‌ಗಳಿಂದ ಸಾಕಷ್ಟು ಕೆಲಸವಾಗುತ್ತಿದ್ದು ಪುನಃ ಗ್ಯಾಂಗ್‌ಮನ್‌ಗಳ ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ? ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

2. ಶಿವಮೊಗ್ಗ ನಗರದ ತುಂಗಾ ದಡದಲ್ಲಿ ರಿವಿಟ್‌ಮೆಂಟ್ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

3. ಎಲ್ಲಾ ಸರ್ಕಾರಿ ನೌಕರರಿಗೆ ವಸತಿ ಗೃಹ ನಿರ್ಮಾಣಕ್ಕೆ ತಗಲಬಹುದಾದ ವೆಚ್ಚ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಲೋಕೋಪಯೋಗಿ ಇಲಾಖೆಗೆಂದೇ ಮಂಜೂರಾದ ಗ್ಯಾಂಗ್‌ಮನ್ ಹುದ್ದೆಗಳು ಇರುವುದಿಲ್ಲ ಹಾಗೂ ಇವುಗಳನ್ನು ಭರ್ತಿ ಮಾಡುವ ಬಗ್ಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇಮಕಾತಿ ವಿಧಾನವನ್ನು ಸದ್ಯಕ್ಕೆ ನಿಗದಿಪಡಿಸಿರುವುದಿಲ್ಲ.